CCE-II-RR/PR/PF/NSR/NSPR(A)/888/4052

**A**

# ಜೂನ್ 2024 ರ ಪರೀಕ್ಷೆ - 2
# JUNE 2024 EXAMINATION - 2

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**CCE RR/PR/PF/ NSR/NSPR**
**FULL SYLLABUS**

Question Paper Serial No.

**ಸಂಕೇತ ಸಂಖ್ಯೆ : 85-K**
**Code No. : 85-K**

## ವಿಷಯ : ಸಮಾಜ ವಿಜ್ಞಾನ
## Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

ದಿನಾಂಕ : 22. 06. 2024 ] [ Date : 22. 06. 2024
ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.
ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ***ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**22. 06. 2024**

**Tear here**

**I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** **8 × 1 = 8**

1. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು

   (A) ವಾರನ್ ಹೇಸ್ಟಿಂಗ್ಸ್

   (B) ಕಾರ್ನ್ ವಾಲೀಸ್

   (C) ವೆಲ್ಲೆಸ್ಲಿ

   (D) ಡಾಲ್‌ಹೌಸಿ

2. ಎರಡನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಮುಖ್ಯ ಕಾರಣ

   (A) ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡದ್ದು

   (B) ಬ್ರಿಟಿಷರು ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದು

   (C) ಬ್ರಿಟಿಷರು ಕಾರವಾರ ಮತ್ತು ಕೊಯಮತ್ತೂರುಗಳನ್ನು ವಶಪಡಿಸಿಕೊಂಡದ್ದು

   (D) ಬ್ರಿಟಿಷರು ಮಂಗಳೂರು ಒಪ್ಪಂದದ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದು

3. ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ಕಛೇರಿ ಇರುವುದು

(A) ನ್ಯೂಯಾರ್ಕ್‌ನಲ್ಲಿ

(B) ಪ್ಯಾರಿಸ್‌ನಲ್ಲಿ

(C) ರೋಮ್‌ನಲ್ಲಿ

(D) ಜಿನೇವಾದಲ್ಲಿ

4. ಭಾರತದ ಚಹಾದ ಬಂದರು

(A) ವಿಶಾಖಪಟ್ಟಣ

(B) ಮರ್ಮ ಗೋವಾ

(C) ಕೋಲ್ಕತ್ತಾ

(D) ಮುಂಬಯಿ

5. ಸಂವಿಧಾನದ 17ನೇ ವಿಧಿಯ ಮಹತ್ವ

(A) ಬಾಲಕಾರ್ಮಿಕರ ನಿಷೇಧ

(B) ಅಸ್ಪೃಶ್ಯತೆಯ ನಿವಾರಣೆ

(C) ಅನಕ್ಷರತೆಯ ನಿವಾರಣೆ

(D) ವರದಕ್ಷಿಣೆಯ ನಿಷೇಧ

6. ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದವರು

(A) ಬಾಬಾ ಆಮ್ಟೆ ಮತ್ತು ಮೇಧಾ ಪಾಟ್ಕರ್

(B) ಸುಂದರ್‌ಲಾಲ್ ಬಹುಗುಣ ಮತ್ತು ಚಂಡಿಪ್ರಸಾದ್ ಭಟ್ಟ

(C) ಡಾ. ಶಿವರಾಮ ಕಾರಂತ ಮತ್ತು ಕುಸುಮ ಸೊರಬ

(D) ಕರ್ವೆ ಮತ್ತು ಶ್ಯಾಮಾಜಿ ಕೃಷ್ಣವರ್ಮ

7. ಭಾರತದ ಹಸಿರು ಕ್ರಾಂತಿಯ ಪಿತಾಮಹ

(A) ವರ್ಗೀಸ್ ಕುರಿಯನ್

(B) ಡಾ. ಎಂ.ಎಸ್. ಸ್ವಾಮಿನಾಥನ್

(C) ಅಮರ್ತ್ಯ ಸೇನ್

(D) ಡಾ. ನಾರ್ಮನ್ ಬೋರ್ಲಾಗ್

8. ರಮೇಶ ಎಂಬ ವ್ಯಕ್ತಿಗೆ ಐದು ವರ್ಷದ ಮಗಳಿದ್ದಾಳೆ. ಆತನು ಭವಿಷ್ಯದಲ್ಲಿ ಅವಳ ವಿವಾಹಕ್ಕೆ ಹಣವನ್ನು ಉಳಿತಾಯ ಮಾಡಲು ನಿರ್ಧರಿಸುತ್ತಾನೆ. ಹಾಗಾದರೆ ಅವನು ತೆರೆಯಬೇಕಾದ ಸೂಕ್ತವಾದ ಬ್ಯಾಂಕ್ ಖಾತೆ

(A) ಉಳಿತಾಯ ಖಾತೆ

(B) ಚಾಲ್ತಿ ಖಾತೆ

(C) ಆವರ್ತ ಠೇವಣಿ ಖಾತೆ

(D) ನಿಶ್ಚಿತ ಠೇವಣಿ ಖಾತೆ

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **8 × 1 = 8**

9. 'ಸತ್ಯಾರ್ಥ ಪ್ರಕಾಶ' ಎಂಬ ಕೃತಿಯನ್ನು ರಚಿಸಿದವರು ಯಾರು ?

10. ಇಲ್ಬರ್ಟ್ ಮಸೂದೆಯ ಮೂಲ ಉದ್ದೇಶವೇನು ?

11. ಸಾಮಾಜಿಕ ಸ್ತರವಿನ್ಯಾಸವು ಹೇಗೆ ರೂಪುಗೊಂಡಿದೆ ?

12. ನಿಶ್ಶಸ್ತ್ರೀಕರಣ ಎಂದರೇನು ?

13. ಪೆಟ್ರೋಲಿಯಂ ಅನ್ನು 'ದ್ರವರೂಪದ ಚಿನ್ನ' ಎಂದು ಕರೆಯಲಾಗಿದೆ. ಏಕೆ ?

14. ಮಳೆನೀರು ಕೊಯ್ಲು ಏಕೆ ಅವಶ್ಯಕವಾಗಿದೆ ?

15. ಅಧಿಕಾರ ವಿಕೇಂದ್ರೀಕರಣ ಎಂದರೇನು ?

16. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಗಿದೆ ?

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **8 × 2 = 16**

17. ಕಾಮನ್‌ವೆಲ್ತ್ ರಾಷ್ಟ್ರ ಸಂಘದ ರಚನೆ ಮಾಡಿದ್ದು ಏಕೆ ?

**ಅಥವಾ**

ಲಾಭಕೋರತನವನ್ನು ನಾವು ಹೇಗೆ ನಿಯಂತ್ರಿಸಬಹುದು ?

18. ಅಪ್ಪಿಕೋ ಚಳವಳಿಯನ್ನು ವಿವರಿಸಿ.

**ಅಥವಾ**

ಬಾಲ್ಯವಿವಾಹದ ದುಷ್ಪರಿಣಾಮಗಳನ್ನು ವಿವರಿಸಿ.

19. ಮೊದಲನೆಯ ಮಹಾಯುದ್ಧದ ಪರಿಣಾಮಗಳೇನು ?

20. ಜುನಾಗಢ್ ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಹೇಗೆ ಸೇರ್ಪಡೆಯಾಯಿತು ?

21. ಇತ್ತೀಚಿನ ವರ್ಷಗಳಲ್ಲಿ ಮಣ್ಣಿನ ಸವೆತವು ಅಧಿಕವಾಗುತ್ತಿದೆ. ಏಕೆ ?

22. ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟ'ವಾಗಿದೆ. ಹೇಗೆ ?

23. ಸಾರ್ವಜನಿಕ ಹಣಕಾಸಿಗಿಂತ ವೈಯಕ್ತಿಕ ಹಣಕಾಸು ಹೇಗೆ ಭಿನ್ನವಾಗಿದೆ ?

24. ಪ್ರತಿವರ್ಷವು ಮಾರ್ಚ್ 15 ರಂದು ವಿಶ್ವಗ್ರಾಹಕರ ಹಕ್ಕುಗಳ ದಿನವನ್ನು ಆಚರಿಸಲಾಗುತ್ತದೆ. ಏಕೆ ?

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**9 × 3 = 27**

25. ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯು ಮೈಸೂರನ್ನು ಮಾದರಿ ರಾಜ್ಯವನ್ನಾಗಿ ಮಾಡಿತು. ಸಮರ್ಥಿಸಿ.

**ಅಥವಾ**

ಭಾರತದ ಸಾಮಾಜಿಕ ಸುಧಾರಣೆಯಲ್ಲಿ ರಾಜಾ ರಾಮ್‌ಮೋಹನ್ ರಾಯ್‌ರ ಪಾತ್ರವು ಸ್ಮರಣೀಯವಾದುದು. ಸಮರ್ಥಿಸಿ.

26. ಭೂ ಬಳಕೆಯ ಮೇಲೆ ಪ್ರಭಾವಬೀರುವ ಅಂಶಗಳನ್ನು ಪಟ್ಟಿ ಮಾಡಿ.

**ಅಥವಾ**

ಭಾರತದ ಕೈಗಾರಿಕಾ ವಲಯಗಳನ್ನು ಪಟ್ಟಿ ಮಾಡಿ.

27. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಮಹತ್ವದ ಪಾತ್ರವಹಿಸುತ್ತವೆ. ದೃಢೀಕರಿಸಿ.

**ಅಥವಾ**

ಭಾರತದ ಅಭಿವೃದ್ಧಿಯಲ್ಲಿ ಪಂಚವಾರ್ಷಿಕ ಯೋಜನೆಗಳು ಮಹತ್ವದ ಪಾತ್ರವಹಿಸಿವೆ. ಹೇಗೆ ?

28. ಬ್ಯಾಂಕ್‌ಗಳು ನಿರ್ವಹಿಸುವ ಕಾರ್ಯಗಳಾವವು ?

**ಅಥವಾ**

ಉದ್ಯಮಿಯ ಕಾರ್ಯಗಳಾವವು ?

29. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು ಯಾವುವು ?

30. ಪ್ಲಾಸಿ ಕದನಕ್ಕೆ ಕಾರಣಗಳು ಮತ್ತು ಅದರ ಫಲಿತಾಂಶಗಳನ್ನು ವಿವರಿಸಿ.

31. ರಷ್ಯಾವು ಭಾರತಕ್ಕೆ ಹಲವು ಸಂದರ್ಭಗಳಲ್ಲಿ ಸಹಕರಿಸುತ್ತಾ ಬಂದಿದೆ. ಹೇಗೆ ?

32. ನಿರುದ್ಯೋಗ ಸಮಸ್ಯೆಗೆ ಪರಿಹಾರೋಪಾಯಗಳಾವುವು ?

33. ಅರಣ್ಯ ಸಂರಕ್ಷಣಾ ವಿಧಾನಗಳನ್ನು ವಿವರಿಸಿ.

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

34. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿ.

**ಅಥವಾ**

ಭಾರತದಲ್ಲಿ ಬ್ರಿಟಿಷ್ ಶಿಕ್ಷಣದ ಪರಿಣಾಮಗಳನ್ನು ವಿವರಿಸಿ.

35. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವು ಕಾರಣಗಳಿಂದ ವಿಫಲವಾಯಿತು. ಸ್ಪಷ್ಟೀಕರಿಸಿ.

36. ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು ?

37. ಭೂಕಂಪಕ್ಕೆ ಕಾರಣಗಳು ಮತ್ತು ಅದರ ಪರಿಣಾಮಗಳನ್ನು ತಿಳಿಸಿ.

**VI.** 38. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** **1 + 4 = 5**

a) $23\frac{1}{2}^{o}$ ಉತ್ತರ ಅಕ್ಷಾಂಶ

b) ಕೊಂಕಣ ತೀರ

c) ಹಿರಾಕುಡ್ ಯೋಜನೆ

d) ಅಮೃತ್‌ಸರ್

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. **5**

DO NOT WRITE ANYTHING HERE